ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಧಾರವಾಡ ಜಿಲ್ಲೆಯ ಗದಗ್ ತ�ತಬೇತಿ ಕೇಂದ್ರದಲ್ಲಿ ಈಗ ಎಷ್ಟು ಜನರು ತರಬೇತಿಯನ್ನು ಪಡೆದಿದ್ದಾರೆ, ಅವರೆಲ್ಲರೂ ಉದ್ಯೋಗದಲ್ಲಿದ್ದಾರೆಯೇ? ಉದ್ಯೋಗ ದಲ್ಲಿದ್ದರೆ ಅವರ ಪಟ್ಟಿಯನ್ನು ಓದಗಿಸಿಕೊಡುತ್ತೀರಾ ?

ಶ್ರೀ ಬಿ. ಬಿ. ನಿಂಗಯ್ಯ.—ಅನಂತರ ತಮಗೆ ಒದಗಿಸಿಕೊಡುತ್ತೇನೆ.

ಕೋಲಾರ ಜಿಲ್ಲೆಯ ಕೆ.ಜಿ.ಎಫ್. ಪೋಲೀಸ್ ಇಲಾಖೆಯಲ್ಲಿ ಪೆಟ್ರೋಲ್ ಖರೀದಿಯಲ್ಲಿ ದುರುಪಯೋಗ ನಡೆದಿರುವುದು.

೨೭೪. ಶ್ರೀ ಆರ್. ವೆಂಕಟರಾಮಯ್ಯ(ಮಂಳಬಾಗಿಲು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯ ಕೆ.ಜಿ.ಎಫ್., ಪೋಲೀಸ್ ಇಲಾಖೆಯಲ್ಲಿ ೧೯೬೬-೬೭ ಮತ್ತು ೧೯೬೭-೬೮ನೇ ಸಾಲಿನಲ್ಲಿ ಪೆಟ್ರೋಲ್ ಖರೀದಿಯಲ್ಲಿ ದುರುಪಯೋಗ ನಡೆದಿರುವುದು ನಿಜವೆ ? ಹಾಗಿದ್ದಲ್ಲಿ ಇದರ ಮೊತ್ತವೆಷ್ಟು ?

ಆ) ಇದಕ್ಕೆ ಕಾರಣರಾಗಿದ್ದ ರಿಸರ್ವ್ ಪೋಲೀಸ್ ಇನ್ಸ್‌ಪೆಕ್ಟರ್ ವಿರುದ್ಧ ಕ್ರಮ ಕೈಗೊಂಡಿಲ್ಲದೆ ಕೇವಲ ಚಾಲಕನನ್ನು ಮಾತ್ರ ಸೆಸ್ಪೆಂಡ್ ಮಾಡಲಾಗಿರುವುದು ಸರಿಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ(ಮುಖ್ಯ ಮಂತ್ರಿಗಳು).—

ಅ) ೧೯೬೬-೬೭ ಮತ್ತು ೧೯೬೭-೬೮ನೇ ಸಾಲಿನಲ್ಲಿ ಕೆ.ಜಿ.ಎಫ್. ಪೊಲೀಸ್ ಘಟಕದಲ್ಲಿ, ಪೆಟ್ರೋಲ್ ಖರೀದಿಯ ಬಗ್ಗೆ ದುರುಪಯೋಗ ನಡೆದಿರುವುದಿಲ್ಲ. ಆದರೆ ೧೯೬೫-೬೬ನೇ ಸಾಲಿನಲ್ಲಿ ರೂ. ೩೫,೧೧೫-೮೨ ಮೌಲ್ಯದ ಪಿ.ಓ.ಎಲ್. ದುರುಪಯೋಗವಾಗಿದೆ.

ಆ) ಚಾಲಕನನ್ನು ೧೨-೨-೧೯೬೮ ರಿಂದ ಸಸ್ಪೆಂಡ್ ಮಾಡಲಾಗಿದ್ದು, ದಿನಾಂಕ ೬-೧೦-೧೯೬೮ ರಿಂದ ವಿಚಾರಣೆಯನ್ನು ಕಾಯ್ದಿರಿಸಿ ಪುನರ್ ನೇಮಿಸಲಾಗಿದೆ. ಇದಲ್ಲದೇ ರಿಸರ್ವ್ ಪೋಲೀಸ್ ಇನ್ಸ್‌ಪೆಕ್ಟರ್ ಅವರನ್ನೂ ಹಾಗೂ ಇತರ ೬ ಜನರನ್ನು ಪಿ.ಓ.ಎಲ್. ದುರುಪಯೋಗಕ್ಕೆ ಜವಾಬ್ದಾರ ರನ್ನಾಗಿ ಮಾಡಲಾಗಿದೆ ಮತ್ತು ಇವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಈ ಕೆಳಕಂಡವರು ಕಾರಣರಾಗಿರುವ ಬಗ್ಗೆ ಪ್ರಾರಂಭಿಕ ವಿಚಾರಣಾ ವರದಿಯಿಂದ ತಿಳಿದು ಬಂದಿದೆ.

	ಶ್ರೀಯುತರಾದ		
೧.	ಫಣೀಂದ್ರ ಸಿಂಗ್	...	ಸಿ.ಪಿ.ಐ.
೨.	ಪುಟ್ಟಸ್ವಾಮಿ	...	ಸಿ.ಪಿ.ಐ.
೩.	ಮೊಹಮ್ಮದ್ ಪೀರ್	...	ಆರ್ ಎಸ್.ಐ., ಕೆ.ಜಿ.ಎಫ್.
೪.	ರಂಗಸ್ವಾಮಿ	...	ಆರ್.ಎಸ್.ಐ., ಕೆ.ಜಿ.ಎಫ್.
೫.	ತೆಮರೂರ್	...	ಆರ್.ಎಸ್.ಐ., ಕೆ.ಜಿ.ಎಫ್.
೬.	ಆರ್. ಶಿವಣ್ಣ	...	ಆರ್.ಎಸ್.ಐ., ಕೆ.ಜಿ.ಎಫ್.
೭.	ದಸರಾಜ್	...	ಎ.ಪಿ.ಸಿ. ಡ್ರೈವರ್
೮.	ಪ್ರಭಾರಾಧ್ಯ	...	ಆರ್.ಪಿ.ಐ.

ಅಧಿಕಾರಿಗಳು ಅನೇಕ ಕಡೆಗಳಲ್ಲಿ ಕೆಲಸ ಮಾಡುತ್ತಿರುವ ಕಾರಣ ಹಾಗೂ ಅವರಲ್ಲಿಬ್ಬರು ಸಿ.ಪಿ.ಐ. ವರ್ಗ ದಲ್ಲಿದಲ್ಲಿರುವ ಕಾರಣ, ಜಂಟಿ ವಿಚಾರಣೆಯನ್ನು ಮಾಡಲು ಆದೇಶ ನೀಡಬೇಕಾಗಿದೆ. ಹಾಗೂ ಈ ಬಗ್ಗೆ ಸೂಕ್ತ ಆದೇಶ ಹೊರಡಿಸಲಾಗುತ್ತಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಪೋಲೀಸ್‌ನವರಿಂದಲೇ ಕಳ್ಳತನವಾದರೆ ಅವರನ್ನು ಹಿಡಿಯುವವರು ಯಾರು ಎನ್ನುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟೀಕರಣವನ್ನು ಕೊಡಬೇಕು. ಕೆ.ಜಿ.ಎಫ್.ನಲ್ಲಿ ರೂ. ೩೫,೧೧೫-೮೨ ಪೈಸೆ ಬೆಲೆಯ ಪೆಟ್ರೋಲನ್ನು ಕಳ್ಳತನ ಮಾಡಿ ದ್ದಾರೆ. ಅದಾದ ಮೇಲೆ ಬೆಂಗಳೂರು, ಚಿಕ್ಕಮಗಳೂರಿಂ, ಕಾರವಾರ, ಧಾರವಾಡ, ತುಮಕೂರು ಮತ್ತು ಚಿತ್ರದುರ್ಗ ಈ ಎಲ್ಲಾ ಕಡೆ ಕಳ್ಳತನವಾಗಿರುವ ಮೊತ್ತ ಸುಮಾರು ೭೦೮೭-೮೪ ರೂ. ಎಂದು

ಕೊಟ್ಟಿದ್ದಾಗಿ. ಇವರುಗಳು ಕಳ್ಳತನ ಮಾಡಿದ್ದು ಇವರುಗಳ ಮೇಲೆ ವಿಚಾರಣೆ ಮಾಡುತ್ತೇವೆ, ಪರಿಶೀಲನೆ ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರೆ ಯಾವಾಗ ಪರಿಶೀಲನೆ ಮಾಡುತ್ತೀರಿ? ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ? ಎಂದುದನ್ನು ಹೇಳಬೇಕು. ಯಾರಾದರೂ ಬೇರೆಯವರು ಕಳ್ಳತನ ಮಾಡಿದರೆ ಪೋಲೀಸ್‌ನವರು ಅವರನ್ನು ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಕೇಸ್‌ನ್ನು ಹಾಕುತ್ತಾರೆ. ಆದರೆ ಇವರುಗಳ ಮೇಲೆ ಯಾವ ವಿಚಾರಣೆಯೆನ್ನು ಮಾಡದೆ ವಾರ್ನಿಂಗ್ ಮಾಡಿ ರಿಕವರಿ ಮಾಡಿದರೆ ಸಾಕೆ? ಮಾನ್ಯ ಮಂತ್ರಿಗಳು ಹೇಳುತ್ತಾರೆ ಸಂಬಂಧಪಟ್ಟವರಿಂದ ಹಣವನ್ನು ವಸೂಲು ಮಾಡಿ ಸರ್ಕಾರದಲ್ಲಿ ಜಮಾ ಮಾಡಿಸಲಾಗಿದೆ ಮತ್ತು ಡಿಪಾರ್ಟ್‌ಮೆಂಟಿಲ್ ಎನ್‌ಕ್ವಯರಿ ಮಾಡಿಸಿ ಕ್ಷೇಮಿಸಲಾಗಿದೆ ಎಂದು ಹೇಳುವುದು ಸರಿಯೇ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೇರವಾದ ಪ್ರಸಂಗಗಳಲ್ಲಿ ಎನ್‌ಕ್ವಯರಿ ಮಾಡಲಿಕ್ಕೆ ಆಜ್ಞೆಯನ್ನು ಹೊರಡಿಸಿದ್ದೇವೆ. ಪೆಟ್ರೋಲ್ ಖರೀದಿಸುವುದರಲ್ಲಿ ಮತ್ತು ಲಾಗ್‌ಬುಕ್ ಬರೆಯುವುದರಲ್ಲಿ ಅಲ್ಪಸ್ವಲ್ಪ ದೂರು ಬಂದು ಸಂಬಂಧಿಸಿದವರಿಗೆ ವಾರ್ನಿಂಗ್ ಮಾಡಲಾಗಿದೆ. ಲಾಗ್‌ಬುಕ್‌ನಲ್ಲಿ ಬರೆಯದೆ ವಾಹನ ನಡೆಸಿರುವ ಬಗ್ಗೆ ಅನುಮಾನ ಬಂದಕಡೆ ಕೆಲವು ಸಂದರ್ಭಗಳಲ್ಲಿ ಸಸ್‌ಪೆಂಡ್ ಮಾಡಿ ಎನ್‌ಕ್ವಯರಿಯನ್ನು ಮಾಡಿಸುತ್ತೇವೆ.

ಶ್ರೀ ಆರ್, ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ಕೆ.ಜಿ.ಎಫ್. ನಲ್ಲಿ ೩೩.೧೧೫–೮೨ ರೂ. ದುರುಪಯೋಗವಾಗಿರುವುದು ಏನು ಸಣ್ಣ ಪೊತ್ತವೇ ? ನಾನು ಕೇಳುತ್ತಿರುವುದೇನೆಂದರೆ ಕಳ್ಳತನ ಮಾಡಿಸಿಕ್ಕಿಕೊಂಡಿರುವವರ ಬಗ್ಗೆ ನಿರ್ಲಕ್ಷ್ಯ ಮನೋಭಾವದಿಂದ ನೋಡುತ್ತೇವೆ, ಸರಿ ಮಾಡುತ್ತೇವೆಂದು ಹೇಳಿದರೆ ಏನು ಪ್ರಯೋಜನ ? ಪೋಲೀಸ್‌ನವರೇ ಕಳ್ಳತನ ಮಾಡಿದರೆ ಏನು ಮೊರೇಲ್ ಇರುತ್ತದೆನ್ನುವುದನ್ನು ಯೋಚನೆ ಮಾಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳಿದ ವಿಷಯ ಅರ್ಥ ಮಾಡಿಕೊಂಡಿರುತ್ತೇನೆ. ಇದರಲ್ಲಿ ಪೋಲೀಸ್‌ನವರು ಒಬ್ಬರೇ ಅಲ್ಲ. ಬೇರೆಯವರೂ ಇರುತ್ತಾರೆ. ಆದ್ದರಿಂದ ಜಾಯಿಂಟ್ ಎನ್‌ಕ್ವಯರಿ ಮಾಡಲು ಆರ್ಡರ್ ಮಾಡಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಹಾಗಲ್ಲ ತಾವು ಹೇಳಿರುವುದು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಟೆಕ್ನಿಕಲಿ ಮಿಸ್ಟೇಕ್ ಆಗಬಾರದೆಂದು ಯಾವ ಯಾವ ಇಲಾಖೆಯಲ್ಲಿ ಯಾರು ಯಾರು ಇದ್ದಾರೆಂಬುದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸುತ್ತೇನೆ.

ಕಾವೇರಿ ಬಲದಂಡೆ ವರುಣ ನಾಲಾ ಶಂಕಸ್ಥಾಪನೆ.

೩೩೦. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ ಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾವೇರಿ ಬಲದಂಡೆ ವರುಣ ನಾಲಾಕ್ಕಾಗಿ ಶಂಕು ಸ್ಥಾಪನೆಯಾದದ್ದು ಯಾವಾಗ, ಹಾಗೂ ಆಗಿನ ಅಂದಾಜು ವೆಚ್ಚವೆಷ್ಟು ?

ಆ) ಈ ನಾಲಾ ನಿರ್ಮಾಣದಿಂದ ಎಲ್ಲೆಲ್ಲಿ, ಎಷ್ಟೆಷ್ಟು ಹೆಕ್ಟೇರ್ ಜಮೀನುಗಳಿಗೆ ನೀರಾವರಿ ಸೌಲಭ್ಯ ದೊರಕುವುದು ?

ಇ) ಈ ನಾಲಾ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ ?

ಈ) ನಾಲಾ ನಿರ್ಮಾಣ ಪೂರ್ಣಗೊಳಿಸುವ ಕೆಲಸ ವಿಳಂಬಗೊಳ್ಳಲು ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಶಂಕುಸ್ಥಾಪನೆ ೧೫–೪–೧೯೭೯ ಅಂದಾಜು ವೆಚ್ಚ ೧೮೫೦ ಲಕ್ಷ ರೂ.ಗಳು.

ಆ) ೩೨,೮೭೫ ಹೆಕ್ಟೇರು (೮೦,೦೦೦ ಎಕರೆ) ನೀರಾವರಿ ಆಗಲಿದೆ.